ಹೊಸ ಸ್ಕೀಂ ಜಾರಿಗೆ ಬಂದಿತು. ಆಗ ಸರ್ಕಾರದವರು ಆ ಶಿಕ್ಷಕರಿಗೆ ಯಾವ ಸ್ಕೀಮು ಅವರಿಗೆ ಅನುಕೂಲವೋ ಆದಕ್ಕೆ ಆಪ್ಷ ಮಾಡಿಕೊಳ್ಳಲು ಇವರಿಗೆ ಅವಕಾಶಕೊಡಲಾಗಿತ್ತು. ಅದರ ಪ್ರಕಾರ ಅವರಿಗೆ ಅನುಕೂಲಗಳನ್ನು ಕೊಡಲಾಗುವುದು.

Sri D. B. KALMANKAR.— Will the Government scrutinise the cases of these five persons who are dead and see that pension is also paid to their successors ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸತ್ತ ಶಿಕ್ಷಕರ ಸಕ್ಸೆಸರಿಗೆ ಆ ಪೊಬಲಗನ್ನು ಕೊಡಲಾಗುವುದು.

ಶ್ರೀ ಎನ್. ಎ. ಚನ್ನೇಗೌಡ.—ಇನ್ನೆಷ್ಟು ಜನ ಸತ್ತಮೇಲೆ ಇದನ್ನು ಜಾರಿಗೆ ಕೊಡುತ್ತೀರಿ ?

(ಉತ್ತರವಿಲ್ಲ)

Sri B. B. SAYANAK.— May I know whether this is the way to treat the Primary School teachers who have served very sincerely the interests of the State ?

Sri N. M. KOTRABASIAH SOGI.—We have treated them very well, Sir. We have given them all possible benefits and we have enhanced the benefits due to them. The amended scheme we are giving effect to, is going to be very beneficial to them. It is going to help them rather than creating inconvenience to them.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸತ್ತು ಹೋಗಿರುವ 5 ಜನ ಶಿಕ್ಷಕರ ಬಾಕಿಯನ್ನು ಯಾರಿಗೆ ಕೊಡುತ್ತಾರೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅವರ ವಾರೆಸ್‌ದಾರರಿಗೆ ಕೊಡಲಾಗುತ್ತದೆ

Fertiliser Factory at Mangalore

80. Sri B. BHASKAR SHETTY (Kaup).—

Will the Minister for Industries, Information and Publicity be pleased to state :—

(*a*) when the works relating to the Mangalore fertiliser factory would be started and the total cost of the factory;

(*b*) the production capacity of this factory and the nature of fertilisers to be produced;

(*c*) whether the said factory would be in the private sector or in the public sector;

(*d*) the partners of this factory and the extent of share capital of each partner;

(*e*) when the said factory would go into production ?

Sri M. RAJASEKHARA MURTHY (Minister for Industries, Information and Publicity).—

(*a*) The work will be started from 1971.

(*b*) *Production capacity*:

(1) Ammonia ... 198,000 tons per year
(2) Urea ... 340,000 tons per year

(*c*) In the private sector.

(*d*) The principal partners and their share holding is as follows: —

		Share	*Preference Share*
		(*In crores of Rupees*)	
1	Government of Mysore ...	2.00	...
2	Mysore State Co-operative Marketing Federation Ltd. ...	1.50	1.50
3	Ralis India Ltd. and others ...	0.45	...
4	Humphrys and Glasgow Ltd. ...	2.40	...
5	Swamy Carbon (N.V.) ...	0.90	...
6	International Development and Investment Co. ...	0.25	...
7	Indian Public ...	3.50	...
8	Indian Finance Institution and others ..	...	1.50
	Total ...	11.00	3.00

(*e*) Expected to go into production in the latter half of 1973.

ಶ್ರೀ ಬಿ. ಭಾಸ್ಕರಶೆಟ್ಟಿ.—ಸ್ಪೀಪಿ, ಈ ಕಾರ್ಖಾನೆಯ ಪಾಲುದಾರರು 8 ಜನ ಇದ್ದಾರೆ. ಮತ್ತು ಇದರ ಷೇರು ಬಂಡವಾಳ 14 ಕೋಟಿ ರೂಪಾಯಿ ಎಂದು ಹೇಳಿದ್ದೀರಿ. ಇದರ ಒಟ್ಟು ವೆಚ್ಚ 43 ಕೋಟಿ ರೂಪಾಯಿಗಳು. ಆದುದರಿಂದ ಇದಕ್ಕಾಗಿ ಬಾಕಿ ಹಣಕ್ಕೆ ಏನು ಏರ್ಪಾಡು ಮಾಡುತ್ತೀರಿ ?

† ಶ್ರೀ ಎಂ. ರಾಜಶೇಖರ ಮೂರ್ತಿ.—ಇಂಡಿಯನ್ ಫೈನಾನ್ಸಿಂಗ್ ಇನ್ಸ್ಟಿಟ್ಯೂಷನ್ ಲೋನ್ ಕೊಡುತ್ತಾರೆ. ಅದನ್ನು ತೆಗೆದುಕೊಳ್ಳುತ್ತೇವೆ. ಯು.ಕೆ. ಗೌರ್ನಮೆಂಟ್ ಕ್ರೆಡಿಟ್‌ನಿಂದ ಸಾಲ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸ್ಪೀಪಿ, ಈ ಗೊಬ್ಬರದ ಕಾರ್ಖಾನೆಯನ್ನು ಶೀಘ್ರಗತಿಯಲ್ಲಿ ನಡೆಸುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ರಾಜಶೇಖರ ಮೂರ್ತಿ.—ಇದಕ್ಕೆ ಬೇಕಾಗುವ ಲ್ಯಾಂಡನ್ನು ಗೌರ್ನಮೆಂಟ್‌ನಿಂದ ಅಲಾಟ್ ಮಾಡುತ್ತಾರೆ. ಅದಕ್ಕೆ ಬರಬೇಕಾದ ಗೌರ್ನಮೆಂಟ್ ಲೋನ್ ಕೂಡ ಬರುತ್ತದೆ. ಇಂಡಿಯನ್ ಫೈನಾನ್ಸ್ ಇನ್ಸ್ಟಿಟ್ಯೂಷನ್‌ನವರು ಲ್ಯಾಂಡನ್ನು ಇನ್‌ಸ್ಪೆಕ್ಟ್ ಮಾಡಿ ಅವರು ಅಪ್ರೂವ್ ಮಾಡಿ ಮಾರ್ಕೆಟ್ ರಿಪೋರ್ಟ್‌ನ್ನು ತಯಾರು ಮಾಡಿ ಗೌರ್ನಮೆಂಟ್‌ಗೆ ಕಳುಹಿಸಿಕೊಟ್ಟಿದ್ದಾರೆ. ಇದಕ್ಕೆ ಬೇಕಾಗುವ ನೀರಿನ ಸರಬರಾಯಿ ಪ್ರಾಜೆಕ್ಟ್ ಇನ್‌ವೆಸ್ಟಿಗೇಷನ್ನಿನಲ್ಲಿದೆ. ಫೈನಾನ್ಸಿಂಗ್ ಇನ್ಸ್ಟಿಟ್ಯೂಷನ್ನಿನವರನ್ನು ಅಪ್ರೋಚ್ ಮಾಡಿ ಅದಕ್ಕೆ ಬೇಕಾದ ಅವಶ್ಯಕವಾದ ಅನುಕೂಲತೆಗಳನ್ನು ಪಡೆದುಕೊಳ್ಳುತ್ತೇವೆ.

ಶ್ರೀ ಸಿ.ಕೆ. ರಾಜಯ್ಯಶೆಟ್ಟಿ.—ಹೋದ ವರ್ಷ ಈ ಮನೆಯಲ್ಲಿ ಈ ಪ್ರಶ್ನೆ ಬಂದಾಗ ಮಲಬಾರ್ ಕೆಮಿಕಲ್ ಫರ್ಟಿಲೈಸರ್ಸ್‌ಗೆ ಇದನ್ನು ಕೊಟ್ಟು ಅವರಿಗೆ 20 ಲಕ್ಷ ರೂಪಾಯಿ ಅಡ್ವಾನ್ಸ್ ಕೊಟ್ಟಿದೆ ಯೆಂದು ತಿಳಿಸಿದಿರಿ. ಈಗ ಮಂಗಳೂರು ಕೆಮಿಕಲ್ ಫರ್ಟಿಲೈಸರ್ಸ್ ಎಂದು ಹೇಳಿದ್ದೀರಲ್ಲಾ ಹಾಗಾದರೆ ಮಲಬಾರ್ ಕೆಮಿಕಲ್ ಫರ್ಟಿಲೈಸರ್ಸ್‌ನವರಿಗೆ ಕೊಟ್ಟ ಹಣ ಏನು ಮಾಡಿದಿರಿ? ಅವರು ವಾಪಸ್ ಕೊಟ್ಟಿಲ್ಲವೆ?

ಶ್ರೀ ಎಂ. ರಾಜಶೇಖರ ಮೂರ್ತಿ.—ಮಾನ್ಯ ಸದಸ್ಯರು ಮಲಬಾರ್ ಕೆಮಿಕಲ್ ಫರ್ಟಿಲೈಸರ್ಸ್ ಕಂಪನಿ ಅನ್ನುವುದನ್ನು ನೋಡಿಲ್ಲ ಎಂದು ಕಾಣುತ್ತದೆ. ಮಂಗಳೂರು ಕೆಮಿಕಲ್ ಫರ್ಟಿಲೈಸರ್ಸ್ ಅನ್ನುವುದೇ ಮಲಬಾರ್ ಕೆಮಿಕಲ್ ಫರ್ಟಿಲೈಸರ್ಸ್.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಇದು ಖಾಸಗೀ ಕ್ಷೇತ್ರದಲ್ಲಿ ಇದೆ ಎಂದು ಹೇಳಿದ್ದೀರಿ. ಹಿಂದೆ ಇದರ ಬಗ್ಗೆ ಚರ್ಚೆ ಬಂದಾಗ ಈ ಫರ್ಟಿಲೈಸರ್ಸ್ ಫ್ಯಾಕ್ಟರಿಯನ್ನು ಆದಷ್ಟುಮಟ್ಟಿಗೆ ಸಾರ್ವಜನಿಕ ಕ್ಷೇತ್ರದಲ್ಲೇ ಮಾಡಬೇಕು ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದರಿಂದ ಸರ್ಕಾರದವರು ಇದನ್ನು ಸಾರ್ವಜನಿಕ ಕ್ಷೇತ್ರದಲ್ಲಿ ಪ್ರಾರಂಭಿಸುವುದಕ್ಕೆ ಏನಾದರೂ ಯೋಚನೆ ಮಾಡಿದ್ದೀರಾ?

ಶ್ರೀ ಎಂ. ರಾಜಶೇಖರ ಮೂರ್ತಿ.—ಖಾಸಗಿ ಕ್ಷೇತ್ರದಲ್ಲಿ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಇದನ್ನು ಸಾರ್ವಜನಿಕ ಕ್ಷೇತ್ರದಲ್ಲಿ ನಡೆಸುವುದಕ್ಕೆ ಅಷ್ಟು ಹಣ ಇಲ್ಲ.

ಶ್ರೀ ಬೋಳ ರಘುರಾಮ ಶೆಟ್ಟಿ.—ಸ್ವಾಮಿ, ತಾವು (ಎ) ಗೆ ಉತ್ತರವಾಗಿ The work will be started from 1971 ಎಂದು ಹೇಳಿದ್ದೀರಿ. ಹಾಗಾದರೆ ಅದನ್ನು ಪ್ರಾರಂಭ ಮಾಡುವುದಕ್ಕೆ ಅಷ್ಟರವರೆಗೆ ಸಾಧ್ಯ ಇಲ್ಲವೇ? ಇಷ್ಟು ವಿಳಂಬವಾಗುವುದಕ್ಕೆ ಕಾರಣ ಏನು?

ಶ್ರೀ ಎಂ. ರಾಜಶೇಖರ ಮೂರ್ತಿ.—ಮಂಗಳೂರಿನಲ್ಲಿ ಅಕ್ಟೋಬರ್, ನವಂಬರ್‌ನಲ್ಲಿ ಮಳೆ ಆಗುತ್ತದೆ. ಆದುದರಿಂದ ಅಲ್ಲಿ ಕೆಲಸವನ್ನು ಡಿಸೆಂಬರ್, ಜನವರಿಯಲ್ಲಿ ಪ್ರಾರಂಭ ಮಾಡಬಹುದು. ಇನ್ನೂ ಲ್ಯಾಂಡ್ ಡೆವಲಪ್ ಆಗಿಲ್ಲ. ಹಾರ್ಬರ್‌ನಿಂದ ಮಣ್ಣು ತಂದು ಅಲ್ಲಿ ಲ್ಯಾಂಡ್‌ನ್ನು ಸರಿ ಮಾಡಬೇಕಾಗಿದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ತಾವು ಮಲಬಾರ್ ಕೆಮಿಕಲ್ ಫರ್ಟಿಲೈಸರ್ಸ್ ಕಂಪನಿಗೆ ಕೊಟ್ಟ 20 ಲಕ್ಷ ರೂಪಾಯಿ ಹಣವನ್ನು ಅವರು ಸರಿಯಾಗಿ ಉಪಯೋಗಿಸಿಲ್ಲ. ಅವರು ಸ್ವಂತಕ್ಕೆ ಉಪಯೋಗಿಸಿಕೊಂಡಿದ್ದಾರೆ. ಈ ವಿಷಯದಲ್ಲಿ ಪೂಣಚ್ಚನವರು ರಿಪೋರ್ಟ್ ಮಾಡಿದ್ದು ನಿಜವೇ?

ಶ್ರೀ ಎಂ. ರಾಜಶೇಖರ ಮೂರ್ತಿ.—ನಾವು ಕೊಟ್ಟ ಹಣ ಎಲ್ಲೂ ಹೋಗಿಲ್ಲ. ಅಲ್ಲಿ ಪ್ರಿಲಿಮಿನರಿ ಎಕ್ಸ್‌ಪೆಂಡಿಚರ್‌ಗೆ, ಅವರ ಸಂಬಳಸಾರಿಗೆಗಳಿಗೆ ಆಗುತ್ತದೆ. ಮುಂದೆ ನಾವು ತೆಗೆದುಕೊಳ್ಳುವ ಷೇರ್‌ನಲ್ಲಿ ಆ ಹಣವನ್ನು ಅಡ್ಜಸ್ಟ್ ಮಾಡುತ್ತೇವೆ.

ಶ್ರೀ ಎನ್. ಎ. ಚನ್ನೇ ಗೌಡ.—ಸ್ವಾಮಿ, ಈ ಗೊಬ್ಬರದ ಕಾರ್ಖಾನೆಯು ಉತ್ಪಾದನಾ ಶಕ್ತಿ ಅಮೋನಿಯಾ ವರ್ಷಕ್ಕೆ 198,000 ಟನ್ನುಗಳು, ಯೂರಿಯಾ ವರ್ಷಕ್ಕೆ 340,000 ಟನ್ನುಗಳು. ಆದರೆ ನಮ್ಮ ರಾಜ್ಯದ ಬೇಡಿಕೆ ಇನ್ನೂ ಜಾಸ್ತಿ ಇರುವಾಗ ಅಮೋನಿಯಾ ಮತ್ತು ಯೂರಿಯಾ ಹೆಚ್ಚು ಉತ್ಪತ್ತಿ ಮಾಡುವುದಕ್ಕೆ ಬೇರೆ ಕಂಪನಿಗೆ ಅವಕಾಶ ಕೊಡುತ್ತೀರಾ? ಅಥವಾ ಬೆಳಗೊಳದಲ್ಲಿರುವ ಫ್ಯಾಕ್ಟರಿಯಲ್ಲಿ ಇದನ್ನು ತಯಾರು ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ?

ಶ್ರೀ ಎಂ. ರಾಜಶೇಖರ ಮೂರ್ತಿ.—1971 ರಲ್ಲಿ ರಾಜ್ಯದಲ್ಲಿ ತಯಾರು ಮಾಡತಕ್ಕಂಥ ಗೊಬ್ಬರದ ಉತ್ಪತ್ತಿ ಈಗ ಇರುವ ಉತ್ಪತ್ತಿ ಎರಡೂ ಸೇರಿ ಹೊಂದಾಣಿಕೆ ಆಗುತ್ತದೆ.

ಶ್ರೀ ಎ. ಆರ್. ಬದರಿನಾರಾಯಣ್.—ಸ್ವಾಮಿ, ಇಂಡಿಯನ್ ಪಬ್ಲಿಕ್‌ನಿಂದ 3½ ಕೋಟಿ ರೂಪಾಯಿಗಳು ಬರುವುದಾದರೆ, ಬಾಕಿ ಷೇರಿಗೆ ಕಾರ್ಪೊರೇಷನ್ ಮಾಡಿದ್ದೀರಾ?

ಶ್ರೀ ಎಂ. ರಾಜಶೇಖರ ಮೂರ್ತಿ.—ಫೈನಾನ್ಸಿಂಗ್ ಇನ್ಸ್‌ಟಿಟ್ಯೂಷನ್ನಿನವರು ಆಕ್ಸೆಪ್ಟ್ ಮಾಡಿದ ಮೇಲೆ ನಾವು ಮಾರ್ಕೆಟ್‌ಗೆ ಹೋಗುತ್ತೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸ್ವಾಮಿ, ತಾವು ಈ ಕಾರ್ಖಾನೆಯಲ್ಲಿ ತಯಾರಾಗುವ ಗೊಬ್ಬರದ ಉತ್ಪಾದನಾ ಶಕ್ತಿ ಅಮೋನಿಯಾ ವರ್ಷಕ್ಕೆ 198,000 ಟನ್ನುಗಳು ಮತ್ತು ಯೂರಿಯಾ ವರ್ಷಕ್ಕೆ 340,000 ಟನ್ನುಗಳು ಎಂದು ಹೇಳಿದ್ದೀರಿ. ಇದಕ್ಕೆ ಬೇಕಾದ ರಾಮೆಟೇರಿಯಲ್ಸ್ ಯಾವುವು ಅದನ್ನು ಇಂಪೋರ್ಟ್ ಮಾಡಿ ತರಿಸುತ್ತೀರಾ?

ಶ್ರೀ ಎಂ. ರಾಜಶೇಖರ ಮೂರ್ತಿ.—ಇದಕ್ಕೆ ಬೇಕಾದ ರಾಮೆಟೇರಿಯಲ್ಸ್‌ನ್ನು ಇಂಪೋರ್ಟ್ ಮಾಡುವುದಕ್ಕೆ ಪರ್ಮಿಷನ್ ಇದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸ್ವಾಮಿ, ತಾವು ಮಂಗಳೂರು ರಾಸಾಯನಿಕ ಗೊಬ್ಬರದ. ಕಾರ್ಖಾನೆಗೆ 20 ಲಕ್ಷ ರೂಪಾಯಿ ಹಣವನ್ನು ಕೊಟ್ಟಿದ್ದೀರಿ. ಇದನ್ನು ಯಾವ ಯಾವ ಕ್ಷೇತ್ರದಲ್ಲಿ ಎಷ್ಟೆಷ್ಟು ಖರ್ಚು ಮಾಡಿದ್ದಾರೆ ಅನ್ನುವ ವಿವರವನ್ನು ತಿಳಿಸುತ್ತೀರಾ ?

Sri M. RAJASHEKHARA MURTHY.—Those details are not with me.

Sri D. B. KALMANKAR.—May I know whether any report is given by Mr. Poonacha? If so, whether it will be placed on the Table ?

Sri M. RAJASHEKHARA MURTHY.—There is no such report.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಈ ಫರ್ಟಿಲೈಸರ್ಸ್ ಕಂಪನಿಯನ್ನು ಯಾವ ಬೇಸಿಸ್ ಮೇಲೆ ತೆರೆಯುತ್ತೀರಿ ? ನಮ್ಮ ದೇಶದಲ್ಲಿ ಅದಕ್ಕೆ ಬೇಕಾದಂಥ ಎಲ್ಲಾ ರಾಮೇಟೇರಿಯಲ್ಸ್ ಸಿಕ್ಕುತ್ತದೆಯೇ ? ಅದಕ್ಕೆ ಬೇಕಾದಂಥ ರಾಮೇಟೇರಿಯಲ್ಸ್‌ನ್ನು ಇಂಪೋರ್ಟ್ ಮಾಡಿಕೊಳ್ಳಬೇಡವೇ ?

Sri M. RAJASHEKHARA MURTHY.—This is naphtha based. Permission to import is already there and the Government of India is going to allow it.

Reservation of Funds for the welfare of Scheduled Castes and Scheduled Tribes by Taluk Development Boards.

93. Sri M. H. JAYAPRAKASH NARAYAN (Sirsi).—

Will the Minister for Development be pleased to state :—

(*a*) the number of Taluk Development Boards in the State and their income during the year 1969–70 ;

(*b*) out of this, Taluk Development Boards which have reserved 18 per cent of their income under various Plan and Non–plan development works according to Government instruction for welfare of S.Cs. and S.Ts.;

(*c*) the amount so reserved, the amount spent and the amount lapsed ;

(*d*) the Taluk Development Boards which have not reserved 18 per cent of their income as per the above instruction for the developmental works in respect of S. Cs. and S. Ts ; if not, the reasons therefor ;

(*e*) the action taken by the Government against the Officers who have violated the above instructions of Government ?

Sri B. L. GOWDA (Deputy Minister for Co-operation).—

(*a*) 175 Development Boards Rs. 5,28,60,590–38.

(*b*) All Development Boards.

(*c*) Amount reserved...Rs. 21,12,461–00.
Amount spent...Rs. 12,64,270–16.
Amount lapsed...Rs. 8,48,190–84.

(*d*) and (*e*) Do not arise in view of reply to clause (*b*).